KACN220013202024

## ಒಂದನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಗುಂಡ್ಲುಪೇಟೆ.

**ದಿನಾಂಕ : 15ನೇ ಜುಲೈ 2026**

**ಉಪಸ್ಥಿತರು : ಶ್ರೀ. ಗಿರೀಶ ಆರ್. ಬಿ., ಬಿ.ಎ.ಎಲ್., ಎಲ್.ಎಲ್.ಬಿ.,**

*1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು,*
ಗುಂಡ್ಲುಪೇಟೆ.

## ಸಿ.ಸಿ ನಂಬರ್ : 485/2024

**ಫಿರ್ಯಾದುದಾರರು : ಸರ್ಕಾರದ ಪರವಾಗಿ :**

ಬೇಗೂರು ಪೊಲೀಸ್ ಠಾಣೆ

(ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ ಪ್ರತಿನಿಧಿಸಲ್ಪಟ್ಟಿದ್ದಾರೆ)

*: ವಿರುದ್ಧ :*

**ಆರೋಪಿತರು :**

**ಎ.ಮುಹಮ್ಮದ್ ಶಾನೀದ್ ಬಿನ್ ಅಬ್ದು**

37 ವರ್ಷ ವಯಸ್ಸು

ವಾಸಃ ಮನ್ನತ್, ತೆಟ್ಟಿಕೊಲಂಗರ್ ಹೌಸ್, ಆತ್ತೋಲಿ, ಕೊಡಚೇರಿ

ಮೋಡಕ್ಕಲೂರು ಪೋಸ್ಟ್, ಕಲ್ಲಿಕೋಟೆ–673315 ಕೇರಳಂ ರಾಜ್ಯ.

***(ಆರೋಪಿತರು ಶ್ರೀಮತಿ ಬಿ ವೈ ಎಲ್ .ವಕೀಲರಿಂದ ಪ್ರತಿನಿಧಿಸಲ್ಪಟ್ಟಿರುತ್ತಾರೆ.)***

**ಘಟನೆಗಳ ವಿವರ :**

| | |
|---|---|
| ಪ್ರಕರಣ ದಾಖಲಾದ ದಿನಾಂಕ | 30.12.2024 |
| ಸಾಕ್ಷಿ ವಿಚಾರಣೆ ಮಾಡಿದ ದಿನಾಂಕ | 23.04.2026 |
| ಸಾಕ್ಷಿ ವಿಚಾರಣೆ ಮುಕ್ತಾಯವಾದ ದಿನಾಂಕ | 14.07.2026 |
| ಆಪಾದಿಸಿದ ಆಪಾದನೆಗಳು | ಭಾರತೀಯ ನ್ಯಾಯ ಸಂಹಿತೆ ಕಲಂ 281, 106(1) ಮತ್ತು ಕಲಂ 196 ಐಎಂವಿ ಆಕ್ಟ್ |
| ನ್ಯಾಯಾಧೀಶರ ಅಭಿಪ್ರಾಯ | ಹೇಳಲಾಗಿರುವ ಆಪಾದನೆಗಳಿಂದ ಆರೋಪಿಯನ್ನು ದೋಷಮುಕ್ತಗೊಳಿಸಿ, ಸ್ವತಂತ್ರಗೊಳಿಸಿ, ಬಿಡುಗಡೆ ಮಾಡಲಾಗಿದೆ. |
| ತೀರ್ಪು ನೀಡಿದ ದಿನಾಂಕ | 15.07.2026 |

**1ನೇ ಹೆಚ್ಚುರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ,.**
**ಗುಂಡ್ಲುಪೇಟೆ**

# ತೀರ್ಪು

ಬೇಗೂರು ವೃತ್ತದ ಆರಕ್ಷಕ ವೃತ್ತ ನಿರೀಕ್ಷಕರು ಆರೋಪಿಯ ವಿರುದ್ಧ ಭಾರತೀಯ ನ್ಯಾಯ ಸಂಹಿತೆ ಕಲಂ 281, 106(1) ಮತ್ತು ಕಲಂ 196 ಐಎಂವಿ ಆಕ್ಟ್ ರ ಅಡಿಯಲ್ಲಿ ದಂಡನೀಯವಾದ ಆಪರಾಧಗಳನ್ನು ಮಾಡಿರುತ್ತಾರೆಂದು ಆರೋಪಿಸಿ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತಾರೆ.

**2. ಅಭಿಯೋಜನೆಯ ಪ್ರಕರಣದ ಸಂಕ್ಷಿಪ್ತ ಸಾರಾಂಶ ಈ ಕೆಳಕಂಡಂತಿರುತ್ತದೆ.**

ದಿನಾಂಕ 02.11.2024 ರಂದು ರಾತ್ರಿ ಸುಮಾರು 8.30 ಗಂಟೆ ಸಮಯದಲ್ಲಿ ಗುಂಡ್ಲುಪೇಟೆ ತಾಲ್ಲೂಕು, ಬೇಗೂರು ಠಾಣಾ ಸರಹದ್ದು ಬೇಗೂರು ಗ್ರಾಮದ ಕೆ.ಎಸ್.ಆರ್.ಟಿ.ಸಿ. ಬಸ್ ನಿಲ್ದಾಣದ ಹತ್ತಿರ ಸಿದ್ದಲಿಂಗೇಶ್ವರ ಟ್ರೇಡರ್ ಗೊಬ್ಬರದ ಅಂಗಡಿಯ ಮುಂಭಾಗ ಹಾದು ಹೋಗಿರುವ ಮೈಸೂರು - ಊಟಿ ಮುಖ್ಯ ರಸ್ತೆಯಲ್ಲಿ ಬೇಗೂರು ಗ್ರಾಮದ ಎಂ.ರಾಜು ರವರು ರಸ್ತೆ ದಾಟುತ್ತಿದ್ದಾಗ, ಆರೋಪಿಯು ಕೆಎಲ್-56-ಹೆಚ್-3244 ನಂಬರಿನ ಮಾರುತಿ ಸ್ವಿಫ್ಟ್ ಕಾರನ್ನು ಅತಿವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದು, ಎಂ. ರಾಜು ರವರಿಗೆ ಡಿಕ್ಕಿ ಪಡಿಸಿದ ಪರಿಣಾಮ, ಎಂ.ರಾಜು ರವರು ಕೆಳಕ್ಕೆ ಬಿದ್ದು, ತಲೆ ಮತ್ತು ಕೈಕಾಲುಗಳಿಗೆ ತೀವ್ರ ಸ್ವರೂಪದ ಗಾಯಗಳಾಗಿಸ್ಥಳದಲ್ಲಿಯೇ ಮೃತಪಟ್ಟಿದ್ದು, ಆರೋಪಿಯು ವಿಮೆ ಚಾಲ್ತಿಯಲ್ಲಿ ಇಲ್ಲದ ವಾಹನವನ್ನು ಚಾಲನೆ ಮಾಡಿದ್ದು , ಈ ಅಪಘಾತಕ್ಕೆ ಆರೋಪಿಯ ಅತಿವೇಗ ಮತ್ತು ಅಜಾಗರೂಕತೆಯ ಚಾಲನೆ ಹಾಗು ನಿರ್ಲಕ್ಷ್ಯತನವೇ ಕಾರಣವಾಗಿರುವುದರಿಂದ ಆರೋಪಿಯ ವಿರುದ್ಧ ಭಾರತೀಯ ನ್ಯಾಯ ಸಂಹಿತೆ ಕಲಂ 281, 106(1) ಮತ್ತು ಕಲಂ 196 ಐಎಂವಿ ಆಕ್ಟ್ ರ ಅಡಿಯಲ್ಲಿ ದೋಷಾರೋಪಣೆ ಮಾಡಿ, ಪ್ರಕರಣವನ್ನು ದಾಖಲಿಸಿ ನ್ಯಾಯಾಲಯಕ್ಕೆ ಸಲ್ಲಿಸಿರುತ್ತಾರೆ.

**3.** ಬೇಗೂರು ಪೊಲೀಸ್ ಠಾಣೆಯವರು ಚಾಸಾ-1 ರವರು ನೀಡಿದ ದೂರನ್ನು ದಾಖಲಿಸಿಕೊಂಡು ಮೊಕದ್ದಮೆ ಸಂಖ್ಯೆ 177/2024ನ್ನು ನ್ಯಾಯಾಲಯಕ್ಕೆ

ನಿವೇದಿಸಿಕೊಂಡಿರುತ್ತಾರೆ. ನಂತರ ತನಿಖಾಧಿಕಾರಿಯು, ದಾಖಲೆಗಳನ್ನು ಪಡೆದು, ಸಾಕ್ಷಿದಾರರ ಹೇಳಿಕೆಯನ್ನು ಪಡೆದು, ತನಿಖೆ ಪೂರೈಸಿ ನ್ಯಾಯಾಲಯಕ್ಕೆ ಅಂತಿಮ ವರದಿಯನ್ನು ಸಲ್ಲಿಸಿರುತ್ತಾರೆ.

**4.** ತನಿಖಾಧಿಕಾರಿಯು ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿದ ನಂತರ ನ್ಯಾಯಾಲಯವು ಸದರಿ ಪ್ರಕರಣದಲ್ಲಿ ಆರೋಪಿಯ ವಿರುದ್ಧ ಭಾರತೀಯ ನ್ಯಾಯ ಸಂಹಿತೆ ಕಲಂ 281, 106(1) ಮತ್ತು ಕಲಂ 196 ಐಎಂವಿ ಆಕ್ಟ್ ರ ಅಡಿಯಲ್ಲಿ ಸಂಜ್ಞೆಯನ್ನು ತೆಗೆದುಕೊಂಡಿರುತ್ತದೆ.

**5.** ಆರೋಪಿಯು ನ್ಯಾಯಾಲಯಕ್ಕೆ ಹಾಜರಾಗಿ ವಕೀಲರನ್ನು ನೇಮಿಸಿಕೊಂಡು, ಜಾಮೀನಿನ ಮೇಲೆ ಬಿಡುಗಡೆಯಾಗಿರುತ್ತಾರೆ. ಆರೋಪಿಗೆ ಭಾರತೀಯ ನಾಗರೀಕ ಸುರಕ್ಷಾ ಸಂಹಿತೆ ಕಲಂ 230 ರ ಅಡಿಯಲ್ಲಿ ಅಭಿಯೋಜನೆಯ ದಾಖಲೆಗಳ ನಕಲನ್ನು ಪೂರೈಸಲಾಗಿರುತ್ತದೆ. ನಂತರ ದೋಷಾರೋಪಣೆ ರಚಿಸುವ ಮೊದಲು ವಾದವನ್ನು ಕೇಳಿ, ಆರೋಪಿಯ ವಿರುದ್ಧ ಆಪಾದಿಸಿರುವ ಆಪಾದನೆಗಳಿಗೆ ದೋಷಾರೋಪಣೆಯನ್ನು ರಚಿಸಲು ಸಾಕಷ್ಟು ಸಾಕ್ಷ್ಯಾಧಾರಗಳು ಕಂಡು ಹಿಡಿದಿದ್ದರಿಂದ ಆರೋಪಿಯ ವಿರುದ್ಧ ದೋಷಾರೋಪಣೆಯನ್ನು ರಚಿಸಿ, ಭಾರತೀಯ ನಾಗರೀಕ ಸುರಕ್ಷಾ ಸಂಹಿತೆ ಕಲಂ 251 ರ ಅಡಿಯಲ್ಲಿ ಆರೋಪಿಗೆ ಅವರಿಗೆ ತಿಳಿಯುವ ಭಾಷೆಯಲ್ಲಿ ಓದಿ, ವಿವರಿಸಿ ಹೇಳಿದಾಗ,

ಆರೋಪಿಯು ಯಾವುದೇ ತಪ್ಪು ಮಾಡಿಲ್ಲ ಎಂದು ಹೇಳಿದ್ದರಿಂದ ಪ್ರಕರಣವನ್ನು ವಿಚಾರಣೆಗೆ ಎತ್ತಿಕೊಳ್ಳಲಾಯಿತು.

6. ಅಭಿಯೋಜನೆಯವರು ನ್ಯಾಯಾಲಯದ ಮುಂದೆ ಹಾಜರು ಪಡಿಸಿರುವ ಸಾಕ್ಷ್ಯಾಧಾರಗಳನ್ನು ಕೂಲಂಕುಷವಾಗಿ ಪರಿಶೀಲನೆ ಮಾಡಲಾಗಿದೆ. ದೋಷಾರೋಪಣಾ ಪಟ್ಟಿಯಲ್ಲಿ ಒಟ್ಟು 18 ಸಾಕ್ಷಿದಾರರನ್ನು ನಮೂದು ಮಾಡಿದ್ದು, ಆ ಪೈಕಿ ಏಳು ಸಾಕ್ಷಿದಾರರನ್ನು ಫ್ರಾಸಾ–1 ರಿಂದ 7 ಎಂದು ವಿಚಾರಣೆ ಮಾಡಿಕೊಂಡಿದ್ದಾರೆ ಮತ್ತು 19 ದಾಖಲೆಯನ್ನು ನಿಪಿ–1 ರಿಂದ 19 ಎಂದು ಗುರುತಿಸಿಕೊಂಡಿರುತ್ತಾರೆ.

7. ಈ ಪ್ರಕರಣದಲ್ಲಿ ಫ್ರಾಸಾ–6 ಮತ್ತು 7 ರವರು ಅಭಿಯೋಜನೆ ಪರವಾಗಿ ಸಾಕ್ಷಿ ನುಡಿದಿರುವುದರಿಂದ ದಂಡ ಪ್ರಕ್ರಿಯ ಸಂಹಿತೆ ಕಲಂ 313 ರ ರೀತ್ಯಾ ಪಡೆದುಕೊಳ್ಳಬೇಕಾದ ಆರೋಪಿಯ ಹೇಳಿಕೆಯನ್ನು ತೆಗೆದುಕೊಳ್ಳಲಾಯಿತು. ಆರೋಪಿಯು ಅಭಿಯೋಜನೆಯ ಸಾಕ್ಷ್ಯವನ್ನು ಅಲ್ಲಗಳೆಯುತ್ತಾರೆ ಮತ್ತು ತಮ್ಮ ಪರವಾಗಿ ಯಾವುದೇ ಸಾಕ್ಷ್ಯವನ್ನು ಹಾಗೂ ದಾಖಲೆಗಳನ್ನು ಹಾಜರು ಪಡಿಸಿರುವುದಿಲ್ಲ.

**8.** ಉಭಯ ಪಕ್ಷಕಾರರ ಪರ ಹಾಜರಾದ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರ ಮತ್ತು ಆರೋಪಿತರ ಪರ ವಕೀಲರ ವಾದಗಳನ್ನು ಆಲಿಸಿ, ಪ್ರಕರಣದ ವಸ್ತುಸ್ಥಿತಿ ಮತ್ತು ಸಂದರ್ಭಗಳನ್ನು ಪರಿಶೀಲನೆ ಮಾಡಿದ ನಂತರ, ಈ ಕೆಳಕಂಡ ಅಂಶಗಳು

ಪ್ರಕರಣದ ಇತ್ಯರ್ಥಕ್ಕಾಗಿ ಮೂಡಿಬಂದಿತು.

## ಅಂಶಗಳು

(1) ದಿನಾಂಕ 02.11.2024 ರಂದು ರಾತ್ರಿ ಸುಮಾರು 8.30 ಗಂಟೆ ಸಮಯದಲ್ಲಿ ಗುಂಡ್ಲುಪೇಟೆ ತಾಲ್ಲೂಕು, ಬೇಗೂರು ಠಾಣಾ ಸರಹದ್ದು ಬೇಗೂರು ಗ್ರಾಮದ ಕೆ.ಎಸ್.ಆರ್.ಟಿ.ಸಿ. ಬಸ್ ನಿಲ್ದಾಣದ ಹತ್ತಿರ ಸಿದ್ದಲಿಂಗೇಶ್ವರ ಟ್ರೇಡರ್ ಗೊಬ್ಬರದ ಅಂಗಡಿಯ ಮುಂಭಾಗ ಹಾದು ಹೋಗಿರುವ ಮೈಸೂರು - ಊಟಿ ಮುಖ್ಯ ರಸ್ತೆಯಲ್ಲಿ ಬೇಗೂರು ಗ್ರಾಮದ ಎಂ.ರಾಜು ರವರು ರಸ್ತೆ ದಾಟುತ್ತಿದ್ದಾಗ, ಆರೋಪಿಯು ಕೆಎಲ್-56-ಹೆಚ್-3244 ನಂಬರಿನ ಮಾರುತಿ ಸ್ವಿಫ್ಟ್ ಕಾರನ್ನು ಅತಿವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದು, ಎಂ. ರಾಜು ರವರಿಗೆ ಡಿಕ್ಕಿ ಪಡಿಸಿದ ಪರಿಣಾಮ, ಎಂ.ರಾಜು ರವರು ಕೆಳಕ್ಕೆ ಬಿದ್ದು, ತಲೆ ಮತ್ತು ಕೈಕಾಲುಗಳಿಗೆ ತೀವ್ರ ಸ್ವರೂಪದ ಗಾಯಗಳಾಗಿಸ್ಥಳದಲ್ಲಿಯೇ ಮೃತಪಟ್ಟಿದ್ದು, ಆರೋಪಿಯು ವಿಮೆ ಚಾಲ್ತಿಯಲ್ಲಿ ಇಲ್ಲದ ವಾಹನವನ್ನು ಚಾಲನೆ ಮಾಡಿದ್ದು , ಈ ಅಪಘಾತಕ್ಕೆ ಆರೋಪಿಯ ಅತಿವೇಗ ಮತ್ತು ಅಜಾಗರೂಕತೆಯ ಚಾಲನೆ ಹಾಗು ನಿರ್ಲಕ್ಷ್ಯತನವೇ ಕಾರಣವಾಗಿದ್ದು, ಆ ಮೂಲಕ ಭಾರತೀಯ ನ್ಯಾಯ ಸಂಹಿತೆ ಕಲಂ 281, 106(1) ಮತ್ತು ಕಲಂ 196 ಐಎಂವಿ ಆಕ್ಟ್ ರ ಅಡಿಯಲ್ಲಿ ದಂಡನೀಯ ಅಪರಾಧವನ್ನು ಎಸಗಿರುತ್ತಾರೆಂದು ಅಭಿಯೋಜನೆಯವರು ನಿಸ್ಸಂಶಯವಾಗಿ ಸಾಬೀತು ಪಡಿಸಿರುವರೇ?

(2) ಯಾವ ಆದೇಶ?

**9.** ಮೇಲ್ಕಂಡ ಅಂಶಗಳಿಗೆ ಈ ಕೆಳಕಂಡಂತೆ ಉತ್ತರಿಸುತ್ತೇನೆ.

**ಅಂಶ ಸಂಖ್ಯೆ : 1 : ನಕಾರಾತ್ಮಕವಾಗಿ**

**ಅಂಶ ಸಂಖ್ಯೆ : 2 : ಅಂತಿಮ ಆದೇಶದಂತೆ ಈ ಕೆಳಕಂಡ**

**ಕಾರಣಗಳಿಗಾಗಿ,**

## ಕಾರಣಗಳು

10. **ಅಂಶ ಸಂಖ್ಯೆ :1 :** ಆರೋಪಿತನ ಮೇಲೆ ಮಾಡಿರುವ ಆರೋಪಗಳನ್ನು ಸಾಬೀತು ಪಡಿಸಲು ಅಭಿಯೋಜನೆಯವರು ಹಾಜರು ಪಡಿಸಿದ ಸಾಕ್ಷಿದಾರರ ಪಟ್ಟಿಯಲ್ಲಿನ ಚಾಸಾ-1 ರಿಂದ ಚಾಸಾ-5, 17 ಮತ್ತು 18 ರವರನ್ನು ಫ್ರಾಸಾ-1 ರಿಂದ ಫ್ರಾಸಾ-7 ಎಂದು ನ್ಯಾಯಾಲಯದ ಮುಂದೆ ವಿಚಾರಣೆ ಮಾಡಿಸಿಕೊಂಡಿರುತ್ತಾರೆ. ಅಭಿಯೋಜನೆ ವಿಚಾರಣೆಯಲ್ಲಿ ಒಟ್ಟು 19 ದಾಖಲೆಯನ್ನು ಹಾಜರುಪಡಿಸಿದ್ದು, ಅವುಗಳನ್ನು ಕ್ರಮವಾಗಿ ನಿಪಿ-1 ರಿಂದ ನಿಪಿ-19 ರವರೆಗೆ ನಿಶಾನೆಗಳನ್ನಾಗಿ ಗುರ್ತಿಸಿಕೊಂಡಿರುತ್ತಾರೆ. ಸದರಿ ದಾಖಲೆಗಳಲ್ಲಿ ಪ್ರಮುಖ ದಾಖಲೆಗಳನ್ನು ಪರಿಶೀಲಿಸಿದಾಗ ನಿಪಿ-1 ಮತ್ತು 2ರ ದಾಖಲೆಗಳು ಪಾಸಾರ್-1 ಮತ್ತು 2 ರವರ ಹೇಳಿಕೆಗಳಾಗಿರುತ್ತವೆ. ನಿಪಿ-3ರ ದಾಖಲೆಯು ದಿನಾಂಕ 03.11.2024 ರಂದು ಜರುಗಿಸಿದ ಸ್ಥಳ ಮಹಜರ್ ಆಗಿರುತ್ತದೆ. ನಿಪಿ-4 ಮತ್ತು 5 ರ ದಾಖಲೆಗಳು ಸ್ಥಳ ಮಹಜರ್ ಕಾಲಕ್ಕೆ ತೆಗೆದ ಛಾಯಚಿತ್ರಗಳಾಗಿರುತ್ತದೆ. ನಿಪಿ-6ರ ದಾಖಲೆಯು ದಿನಾಂಕ 03.11.2024 ರಂದು ಜರುಗಿಸಿದ ಅಮಾನತ್ತು ಮಹಜರ್ ಆಗಿರುತ್ತದೆ. ನಿಪಿ-7 ಮತ್ತು 8 ರ ದಾಖಲೆಗಳು ಅಮಾನತ್ತು ಮಹಜರ್ ಕಾಲಕ್ಕೆ ತೆಗೆದ ಛಾಯಚಿತ್ರಗಳಾಗಿರುತ್ತದೆ. ನಿಪಿ-9 ರ ದಾಖಲೆಯು ಚಾಸಾ-1 ರವರು ದಿನಾಂಕ 03.11.2024 ರಂದು ನೀಡಿದ ದೂರಾಗಿರುತ್ತದೆ. ನಿಪಿ-10 ರ ದಾಖಲೆಯು ಶವ ತನಿಖಾ

ವರದಿ ಆಗಿರುತ್ತದೆ, ನಿಪಿ–11 ರ ದಾಖಲೆಯು ಪಿ ಎಂ ವರದಿ ಆಗಿರುತ್ತದೆ, ನಿಪಿ– ನಿಪಿ–12 ರ ದಾಖಲೆಯು ಕಲಂ 133 ಐ ಎಂ ವಿ ಆಕ್ಟ್ ರೀತ್ಯಾ ನೀಡಿದ ನೋಟೀಸು ಹಾಗು ನಿಪಿ–13ರ ದಾಖಲೆಯು ನಿಪಿ–12 ರ ನೋಟೀಸಿಗೆ ನೀಡಿದ ಉತ್ತರವಾಗಿರುತ್ತದೆ. ನಿಪಿ–14 ರ ದಾಖಲೆಯು ಕಚ್ಚಾ ನಕಾಶೆಯಾಗಿರುತ್ತದೆ, ನಿಪಿ–15 ಮತ್ತು 16 ರ ದಾಖಲೆಗಳು ಶವ ತನಿಖಾ ಕಾಲಕ್ಕೆ ತೆಗೆದ ಛಾಯಾಚಿತ್ರಗಳಾಗಿರುತ್ತವೆ. ನಿಪಿ–17 ರ ದಾಖಲೆಯು ಐ ಎಂ ವಿ ವರದಿಯಾಗಿದ್ದು, ನಿಪಿ–18 ರ ದಾಖಲೆಯು ಭಾರತೀಯ ಸಾಕ್ಷ್ಯ ಅಧಿನಿಯವ ಕಲಂ 63(4) ರ ರೀತ್ಯಾ ನೀಡಿದ ದಾಖಲೆಯಾಗಿರುತ್ತದೆ. ನಿಪಿ–19 ರ ದಾಖಲೆಯು ಪ್ರಥಮ ವರ್ತಮಾನ ವರದಿಯಾಗಿರುತ್ತದೆ.

**10**. ದಿನಾಂಕ 14.07.2026 ರಂದು ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ಚಾಸಾ–06 ರಿಂದ ಚಾಸಾ–16ರವರ ಸಾಕ್ಷ್ಯವನ್ನು ಮಾಡಿಸುವುದರಿಂದ ಕೈಬಿಟ್ಟಿರುತ್ತಾರೆ ಮತ್ತು ಈ ಪ್ರಕರಣದಲ್ಲಿ ಫಿರ್ಯಾ–6 ಮತ್ತು 7ರವರು ಮಾತ್ರ ಅಭಿಯೋಜನೆಯ ಪರವಾಗಿ ಸಾಕ್ಷಿ ನುಡಿದಿದ್ದು, ಫ್ರಾಸಾ–1ರಿಂದ 5 ರವರು ಅಭಿಯೋಜನೆಯ ಪರವಾಗಿ ಸಾಕ್ಷ್ಯವನ್ನು ನುಡಿಯದೆ ಪ್ರತಿಕೂಲ ಸಾಕ್ಷ್ಯವನ್ನು ನುಡಿದಿರುತ್ತಾರೆ.

**11.** ಅಭಿಯೋಜನೆಯು ಪ್ರಮುಖವಾಗಿ ದಿನಾಂಕ 02.11.2024 ರಂದು ರಾತ್ರಿ ಸುಮಾರು 8.30 ಗಂಟೆ ಸಮಯದಲ್ಲಿ ಗುಂಡ್ಲುಪೇಟೆ ತಾಲ್ಲೂಕು, ಬೇಗೂರು ಠಾಣಾ ಸರಹದ್ದು ಬೇಗೂರು ಗ್ರಾಮದ ಕೆ.ಎಸ್.ಆರ್.ಟಿ.ಸಿ. ಬಸ್ ನಿಲ್ದಾಣದ ಹತ್ತಿರ ಸಿದ್ದಲಿಂಗೇಶ್ವರ

ಟ್ರೇಡರ್ ಗೊಬ್ಬರದ ಅಂಗಡಿಯ ಮುಂಭಾಗ ಹಾದು ಹೋಗಿರುವ ಮೈಸೂರು – ಊಟಿ ಮುಖ್ಯ ರಸ್ತೆಯಲ್ಲಿ ಬೇಗೂರು ಗ್ರಾಮದ ಎಂ.ರಾಜು ರವರು ರಸ್ತೆ ದಾಟುತ್ತಿದ್ದಾಗ, ಆರೋಪಿಯು ಕೆಎಲ್-56-ಹೆಚ್-3244 ನಂಬರಿನ ಮಾರುತಿ ಸ್ವಿಫ್ಟ್ ಕಾರನ್ನು ಅತಿವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದು, ಎಂ. ರಾಜು ರವರಿಗೆ ಡಿಕ್ಕಿ ಪಡಿಸಿದ ಪರಿಣಾಮ, ಎಂ.ರಾಜು ರವರು ಕೆಳಕ್ಕೆ ಬಿದ್ದು, ತಲೆ ಮತ್ತು ಕೈಕಾಲುಗಳಿಗೆ ತೀವ್ರ ಸ್ವರೂಪದ ಗಾಯಗಳಾಗಿಸ್ಥಳದಲ್ಲಿಯೇ ಮೃತಪಟ್ಟಿದ್ದು, ಆರೋಪಿಯು ವಿಮೆ ಚಾಲ್ತಿಯಲ್ಲಿ ಇಲ್ಲದ ವಾಹನವನ್ನು ಚಾಲನೆ ಮಾಡಿದ್ದು, ಈ ಅಪಘಾತಕ್ಕೆ ಆರೋಪಿಯ ಅತಿವೇಗ ಮತ್ತು ಅಜಾಗರೂಕತೆಯ ಚಾಲನೆ ಹಾಗು ನಿರ್ಲಕ್ಷ್ಯತನವೇ ಕಾರಣವಾಗಿರುತ್ತದೆ ಎಂಬುದನ್ನು ಸಂಶಯತೀತವಾಗಿ ರುಜುವಾತು ಪಡಿಸಬೇಕಾಗುತ್ತದೆ.

**12**. ಚಾಸಾ-1ನೇಯವರಾದ ಮಹೇಶ ರವರು ಈ ಪ್ರಕರಣದಲ್ಲಿ ದೂರುದಾರ, ಸ್ಥಳ ಮಹಜರ್ ಮತ್ತು ಅಮಾನತ್ತು ಮಹಜರ್ ಸಾಕ್ಷಿದಾರರಾಗಿದ್ದು, ಅಭಿಯೋಜನೆ ಪರವಾಗಿ ಫ್ರಾಸಾ-5 ಎಂದು ಸಾಕ್ಷಿ ನುಡಿದಿರುತ್ತಾರೆ. ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಈ ಪ್ರಕರಣದ ಬಗ್ಗೆ ತನಗೆ ಏನೂ ಗೊತ್ತಿಲ್ಲ, ಪೊಲೀಸರು ಅವರ ಸಮಕ್ಷಮ ಯಾವುದೇ ಮಹಜರ್ ಮಾಡಿಲ್ಲ, ಅಪಘಾತ ಹೇಗೆ ಆಯಿತು ಎಂದು ತನಗೆ ಗೊತ್ತಿಲ್ಲ, ನಿಶಾನೆಯಾಗಿ ಗುರುತಿಸಲ್ಪಟ್ಟ ದಾಖಲೆಗಳಲ್ಲಿ ಬರೆದ ವಿಚಾರಗಳು ತನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ನಂತರ ಫ್ರಾಸಾ-5 ರವರನ್ನು ಸಹಾಯಕ ಸರ್ಕಾರಿ ಅಭಿಯೋಜಕರು ಪ್ರತಿಕೂಲ ಸಾಕ್ಷಿದಾರರೆಂದು

ಪರಿಗಣಿಸಿ ವಿವರವಾಗಿ ಪಾಟೀ ಸವಾಲು ಮಾಡಿದರೂ ಸಹಿತ ಅಭಿಯೋಜನೆಗೆ ಪೂರಕ ಸಾಕ್ಷ್ಯವನ್ನು ಪಡೆಯಲು ವಿಫಲವಾಗಿರುತ್ತಾರೆ.

**13**. ಚಾಸಾ–2ನೇಯವರಾದ ನಾಗೇಶ ಮತ್ತು ಚಾಸಾ–3 ರಮೇಶ ರವರುಗಳು ಈ ಪ್ರಕರಣದಲ್ಲಿ ಪ್ರತ್ಯಕ್ಷ ಸಾಕ್ಷಿದಾರರಾಗಿದ್ದು, ಅಭಿಯೋಜನೆ ಪರವಾಗಿ ಫ್ರಾಸಾ–1 ಮತ್ತು 2 ಎಂದು ಸಾಕ್ಷಿ ನುಡಿದಿರುತ್ತಾರೆ. ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಈ ಪ್ರಕರಣದ ಬಗ್ಗೆ ತಮಗೆ ಏನೂ ಗೊತ್ತಿಲ್ಲ, ತಾವು ಯಾವುದೇ ಅಪಘಾತವನ್ನು ನೋಡಿಲ್ಲ, ಅಪಘಾತ ಹೇಗೆ ಆಯಿತು ಎಂದು ತಮಗೆ ಗೊತ್ತಿಲ್ಲ, ತಾವುಗಳು ಪೊಲೀಸರಿಗೆ ಯಾವುದೇ ಹೇಳಿಕೆ ನೀಡಿಲ್ಲ ಎಂದು ಹೇಳುತ್ತಾರೆ. ನಂತರ ಫ್ರಾಸಾ–1 ಮತ್ತು 2 ರವರನ್ನು ಸಹಾಯಕ ಸರ್ಕಾರಿ ಅಭಿಯೋಜಕರು ಪ್ರತಿಕೂಲ ಸಾಕ್ಷಿದಾರರೆಂದು ಪರಿಗಣಿಸಿ ವಿವರವಾಗಿ ಪಾಟೀ ಸವಾಲು ಮಾಡಿದರೂ ಸಹಿತ ಅಭಿಯೋಜನೆಗೆ ಪೂರಕ ಸಾಕ್ಷ್ಯವನ್ನು ಪಡೆಯಲು ವಿಫಲವಾಗಿರುತ್ತಾರೆ.

**14**. ಚಾಸಾ–4ನೇಯವರಾದ ಕೃಷ್ಣಶೆಟ್ಟಿ ಮತ್ತು ಚಾಸಾ–5ನೇಯವರಾದ ರವಿ ರವರುಗಳು ಈ ಪ್ರಕರಣದಲ್ಲಿ ಸ್ಥಳ ಮಹಜರ್ ಮತ್ತು ಅಮಾನತ್ತು ಮಹಜರುಗಳ ಸಾಕ್ಷಿದಾರರಾಗಿದ್ದು, ಅಭಿಯೋಜನೆ ಪರವಾಗಿ ಕ್ರಮವಾಗಿ ಫ್ರಾಸಾ–3 ಮತ್ತು 4 ಎಂದು ಸಾಕ್ಷಿ ನುಡಿದಿರುತ್ತಾರೆ. ಇವರುಗಳು ತಮ್ಮ ಮುಖ್ಯ ವಿಚಾರಣೆಯಲ್ಲಿ ಈ ಪ್ರಕರಣದ ಬಗ್ಗೆ ತಮಗೆ ಏನೂ ಗೊತ್ತಿಲ್ಲ, ಅವರ ಸಮಕ್ಷಮ ಯಾವುದೇ ಸ್ಥಳ ಮಹಜರ್ ಮತ್ತು ಅಮಾನತ್ತು ಮಹಜರ್ ಮಾಡಿಲ್ಲ, ನಿಶಾನೆಯಾಗಿ ನಿಪಿ–3 ಮತ್ತು ನಿಪಿ–6 ರ ದಾಖಲಗಳಲ್ಲಿ ಇರುವ ವಿಚಾರ ತಮಗೆ

ಗೊತ್ತಿಲ್ಲ ಎಂದು ಹೇಳುತ್ತಾರೆ. ನಂತರ ಪ್ರಾಸಾ-3 ಮತ್ತು 4 ರವರನ್ನು ಸಹಾಯಕ ಸರ್ಕಾರಿ ಅಭಿಯೋಜಕರು ಪ್ರತಿಕೂಲ ಸಾಕ್ಷಿದಾರರೆಂದು ಪರಿಗಣಿಸಿ ವಿವರವಾಗಿ ಪಾಟೀ ಸವಾಲು ಮಾಡಿದರೂ ಸಹಿತ ಅಭಿಯೋಜನೆಗೆ ಪೂರಕ ಸಾಕ್ಷ್ಯವನ್ನು ಪಡೆಯಲು ವಿಫಲವಾಗಿರುತ್ತಾರೆ.

**15.** ಚಾಸಾ-17ನೇಯವರಾದ ಮಹೇಶ್ ಕುಮಾರ್ ಹಾಗು ಚಾಸಾ-18ನೇಯವರಾದ ವಿ.ಸಿ.ವನರಾಜು ರವರುಗಳು ಈ ಪ್ರಕರಣದಲ್ಲಿ ತನಿಖಾಧಿಕಾರಿಗಳಾಗಿದ್ದು, ಅಭಿಯೋಜನೆ ಪರವಾಗಿ ಪ್ರಾಸಾ-7 ಮತ್ತು 6 ಎಂದು ಸಾಕ್ಷಿ ನುಡಿದಿರುತ್ತಾರೆ. ಪ್ರಾಸಾ-7 ಮತ್ತು 6 ರವರು ತಮ್ಮ ವಿಚಾರಣೆಯಲ್ಲಿ ದಿನಾಂಕ 03.11.2024 ರಂದು ಬೆಳಿಗ್ಗೆ 7.30 ಗಂಟೆಯಲ್ಲಿ ಪ್ರಾಸಾ-7 ರವರು ಠಾಣೆಯಲ್ಲಿರುವಾಗ ಫಿರ್ಯಾದಿಯವರು ನೀಡಿದ ಲಿಖಿತ ದೂರನ್ನು ಸ್ವೀಕರಿಸಿ ಠಾಣಾ ಮೊಕದ್ದಮೆ ಸಂಖ್ಯೆ - 177/2024 ರಲ್ಲಿ ಪ್ರಕರಣವನ್ನು ನೋಂದಾಯಿಸಿರುವುದಾಗಿ ಹೇಳುತ್ತಾರೆ. ಪ್ರಾಸಾ-6 ರವರು ದಿನಾಂಕ 03.11.2024 ರಂದು ಬೇಗೂರು ಸರ್ಕಾರಿ ಆಸ್ಪತ್ರೆಗೆ ಭೇಟಿ ನೀಡಿ, ಶವ ತನಿಖೆ ಮಾಡಿದ ಬಗ್ಗೆ ಹಾಗು ಅಪಘಾತಕ್ಕೆ ಒಳಪಟ್ಟ ವಾಹನವನ್ನು ವಶಕ್ಕೆ ಪಡೆದ ಬಗ್ಗೆ, ಕೃತ್ಯ ನಡೆದ ಸ್ಥಳಕ್ಕೆ ಭೇಟಿ ನೀಡಿ, ಮಹಜರ್ ಜರುಗಿಸಿದ ಬಗ್ಗೆ, ಕಚ್ಚಾ ನಕಾಶೆಯನ್ನು ತಯಾರು ಮಾಡಿದ ಬಗ್ಗೆ, ಸಾಕ್ಷಿದಾರರ ಹೇಳಿಕೆ ಪಡೆದು, ದಾಖಲೆಗಳನ್ನು ಸಂಗ್ರಹ ಮಾಡಿದ ಬಗ್ಗೆ ಸಾಕ್ಷಿ ನುಡಿದಿರುತ್ತಾರೆ ಹಾಗು ಆರೋಪಿತರ ಮೇಲೆ ಅಂತಿಮ ವರದಿ ಸಲ್ಲಿಸಿದ ಬಗ್ಗೆ ಸಾಕ್ಷಿ ನುಡಿದಿರುತ್ತಾರೆ. ನಂತರ ಆರೋಪಿ ಪರ ವಕೀಲರು ಮಾಡಿದ ಸಲಹೆಗಳನ್ನು ಪ್ರಾಸಾ-7 ಮತ್ತು 6 ರವರು ಅಲ್ಲಗೆಳೆದಿರುತ್ತಾರೆ.

**16**. ಈಗಾಗಲೇ ಈ ಮೇಲೆ ವಿವರವಾಗಿ ಚರ್ಚಿಸಿದಂತೆ ಅಭಿಯೋಜನೆಯ ಪರವಾಗಿ ಫ್ರಾಸಾ-6 ಮತಲ್ತು 7 ರವರು ಸಾಕ್ಷ್ಯವನ್ನು ನುಡಿದಿದ್ದರೂ, ಫ್ರಾಸಾ-1 ರಿಂದ 5ರವರುಗಳು ಅಭಿಯೋಜನೆ ಪ್ರಕರಣಕ್ಕೆ ಪೂರಕವಾಗಿ ಸಾಕ್ಷಿ ನುಡಿಯದೇ ಇರುವುದು ಕಂಡುಬರುತ್ತದೆ. ಅಭಿಯೋಜನೆಯವರ ಪ್ರಕಾರ ಫ್ರಾಸಾ-5 ರವರು ದೂರುದಾರರಾಗಿದ್ದು, ಫ್ರಾಸಾ- 1 ಮತ್ತು 2ರವರುಗಳು ಪ್ರತ್ಯಕ್ಷ ಸಾಕ್ಷಿದಾರರಾಗಿದ್ದರೂ, ಅಭಿಯೋಜನೆಗೆ ಪೂರಕವಾಗಿ ಸಾಕ್ಷಿ ನುಡಿದಿರುವುದಿಲ್ಲ. ಫ್ರಾಸಾ-3 ಮತ್ತು 4 ರವರು ಮಹಜರ್ ಸಾಕ್ಷಿದಾರರಾಗಿದ್ದು, ಸ್ಥಳ ಮಹಜರ್ ಮತ್ತು ಅಮಾನತ್ತು ಮಹಜರಿಗೆ ಸಹಿ ಮಾಡಿರುವುದಾಗಿ ಹೇಳಿದರೂ, ಅವರ ಸಮಕ್ಷಮ ಯಾವುದೇ ಮಹಜರ್ ಮಾಡಿಲ್ಲ, ಮಹಜರುಗಳಲ್ಲಿ ಬರೆದ ವಿಚಾರಗಳು ತಮಗೆ ಗೊತ್ತಿಲ್ಲ ಎಂದು ಹೇಳಿರುತ್ತಾರೆ ಹಾಗು ಫ್ರಾಸಾ-3 ಮತ್ತು 4 ರವರು ಅಭಿಯೋಜನೆಯ ಪ್ರಕರಣಕ್ಕೆ ಪ್ರತಿಕೂಲವಾಗಿ ಸಾಕ್ಷಿ ನುಡಿದಿರುತ್ತಾರೆ. ಆರೋಪಿಯ ತಪ್ಪಿನಿಂದ ಅಪಘಾತ ಆಗಿರುತ್ತದೆ ಎಂಬ ಬಗ್ಗೆ ಯಾವುದೇ ಸಾಕ್ಷಿಯೂ ನ್ಯಾಯಾಲಯದ ಮುಂದೆ ಲಭ್ಯವಿರುವುದಿಲ್ಲ. ಕಾರಣ, ಆರೋಪಿಯು ದಿನಾಂಕ 02.11.2024 ರಂದು ರಾತ್ರಿ ಸುಮಾರು 8.30 ಗಂಟೆ ಸಮಯದಲ್ಲಿ ಗುಂಡ್ಲುಪೇಟೆ ತಾಲ್ಲೂಕು, ಬೇಗೂರು ಠಾಣಾ ಸರಹದ್ದು ಬೇಗೂರು ಗ್ರಾಮದ ಕೆ.ಎಸ್.ಆರ್.ಟಿ.ಸಿ. ಬಸ್ ನಿಲ್ದಾಣದ ಹತ್ತಿರ ಸಿದ್ದಲಿಂಗೇಶ್ವರ ಟ್ರೇಡರ್ ಗೊಬ್ಬರದ ಅಂಗಡಿಯ ಮುಂಭಾಗ ಹಾದು ಹೋಗಿರುವ ಮೈಸೂರು - ಊಟಿ ಮುಖ್ಯ ರಸ್ತೆಯಲ್ಲಿ ಬೇಗೂರು ಗ್ರಾಮದ ಎಂ.ರಾಜು ರವರು ರಸ್ತೆ ದಾಟುತ್ತಿದ್ದಾಗ, ಕೆಎಲ್-56-ಹೆಚ್-3244 ನಂಬರಿನ

ಮಾರುತಿ ಸ್ವಿಫ್ಟ್ ಕಾರನ್ನು ಅತಿವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದು, ಎಂ. ರಾಜು ರವರಿಗೆ ಡಿಕ್ಕಿ ಪಡಿಸಿದ ಪರಿಣಾಮ, ಎಂ.ರಾಜು ರವರು ಕೆಳಕ್ಕೆ ಬಿದ್ದು, ತಲೆ ಮತ್ತು ಕೈಕಾಲುಗಳಿಗೆ ತೀವ್ರ ಸ್ವರೂಪದ ಗಾಯಗಳಾಗಿಸ್ಥಳದಲ್ಲಿಯೇ ಮೃತಪಟ್ಟಿರುತ್ತಾರೆ ಮತ್ತು ಆರೋಪಿಯು ವಿಮೆ ಚಾಲ್ತಿಯಲ್ಲಿ ಇಲ್ಲದ ವಾಹನವನ್ನು ಚಾಲನೆ ಮಾಡಿರುತ್ತಾರೆ ಮತ್ತು ಈ ಅಪಘಾತಕ್ಕೆ ಆರೋಪಿಯ ಅತಿವೇಗ ಮತ್ತು ಅಜಾಗರೂಕತೆಯ ಚಾಲನೆ ಹಾಗು ನಿರ್ಲಕ್ಷ್ಯತನವೇ ಕಾರಣವಾಗಿರುತ್ತದೆ ಎಂಬುದನ್ನು ಸಂಶಯತೀತವಾಗಿ ರುಜುವಾತುವಾತು ಪಡಿಸುವಲ್ಲಿ ಅಭಿಯೋಜನೆಯವರು ವಿಫಲರಾಗಿರುತ್ತಾರೆ.

17. ಈ ಎಲ್ಲಾ ಕಾರಣಗಳಿಂದ ಅಭಿಯೋಜನೆಯವರು ಪ್ರಕರಣವನ್ನು ನ್ಯಾಯಾಲಯದಲ್ಲಿ ಋಜುವಾತು ಪಡಿಸಲು ವಿಫಲರಾಗಿದ್ದು, ಆರೋಪಿತ ತಪ್ಪಿತಸ್ಥರೆಂದು ನಿರ್ಧರಿಸಲು ನ್ಯಾಯಾಲಯದ ಮುಂದೆ ಸಾಕ್ಷ್ಯದಾರಗಳು ಕಂಡು ಬರುವುದಿಲ್ಲವಾದ್ದರಿಂದ, ಸಂಶಯದ ಲಾಭವನ್ನು ಆರೋಪಿಗೆ ನೀಡಲಾಯಿತು. ಹೀಗಾಗಿ ಅಭಿಯೋಜನೆಯವರು ಆರೋಪಿಯ ಮೇಲೆ ಹೊರಿಸಲಾಗಿರುವ ಆಪಾದನೆಗಳನ್ನು ಸಂಶಯಾತೀತವಾಗಿ ಋಜುವಾತು ಪಡಿಸಲು ಸಂಪೂರ್ಣವಾಗಿ ವಿಫಲರಾಗಿರುತ್ತಾರೆಂದು ತೀರ್ಮಾನಿಸಿ ಮೇಲ್ಕಂಡ **ಅಂಶ ಸಂಖ್ಯೆ 1ಕ್ಕೆ ನಕರಾತ್ಮಕವಾಗಿ** ಉತ್ತರಿಸಿ ಈ ಕೆಳಕಂಡಂತೆ ಆದೇಶ ಮಾಡಲಾಗಿರುತ್ತದೆ.

18. **ಅಂಶ ಸಂಖ್ಯೆ 2** : ಈ ಮೇಲ್ಕಂಡ ಅಂಶಗಳಲ್ಲಿ ಚರ್ಚಿಸಲಾದ ಕಾರಣಗಳಿಗಾಗಿ ಈ

ಅಂತಿಮ ಆದೇಶ ಈ ಕೆಳಕಂಡಂತೆಃ–

## ಆದೇಶ

ಭಾರತೀಯ ನಾಗರೀಕ ಸುರಕ್ಷಾ ಸಂಹಿತೆ ಕಲಂ 271(1) ರ ಅಡಿಯಲ್ಲಿ ಅಧಿಕಾರಯುಕ್ತನಾಗಿ ಆರೋಪಿಯ ವಿರುದ್ಧ ಭಾರತೀಯ ನ್ಯಾಯ ಸಂಹಿತೆ ಕಲಂ 281, 106(1) ಮತ್ತು ಕಲಂ 196 ಐಎಂವಿ ಆಕ್ಟ್ ರ ಅಡಿಯಲ್ಲಿ ಹೊರಿಸಲಾದಂತಹ ಆಪಾದನೆಗಳಿಂದ ಆರೋಪಿಯನ್ನು ದೋಷಮುಕ್ತಗೊಳಿಸಿ, ಬಿಡುಗಡೆ ಮಾಡಲಾಗಿದೆ.

ಆರೋಪಿ ಹಾಗೂ ಜಾಮೀನುದಾರರು ಬರೆದುಕೊಟ್ಟ ಮುಚ್ಚಳಿಕೆ ಪತ್ರವನ್ನು ಈ ತಕ್ಷಣದಿಂದ ಜಾರಿಗೆ ಬರುವಂತೆ ರದ್ದುಪಡಿಸಲಾಗಿದೆ.

(ಮೇಲಿನ ತೀರ್ಪನ್ನು ಶೀಘ್ರಲಿಪಿಗಾರರಿಗೆ ಉಕ್ತಲೇಖದ ಮೂಲಕ ಹೇಳಿ, ಲಿಪ್ಯಂತರ ಮಾಡಿಸಿ, ನನ್ನಿಂದ ಸೂಕ್ತವಾಗಿ ತಿದ್ದುಪಡಿಯಾದ ನಂತರ ದಿನಾಂಕ 15ನೇ ಜುಲೈ 2026 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಯಿತು.)

**(ಗಿರೀಶ ಆರ್. ಬಿ.)**
**1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.,**
***ಗುಂಡ್ಲುಪೇಟೆ.***

## * ಅನುಬಂಧ *

**I. ಅಭಿಯೋಜನೆ ಪರ ವಿಚಾರಣೆಗೊಳಪಟ್ಟ ಸಾಕ್ಷಿದಾರರ ಪಟ್ಟಿ:**

ಪ್ರಾಸಾ : 1 : ನಾಗೇಶ

ಪ್ರಾಸಾ : 2 : ರಮೇಶ

ಫ್ರಾಸಾ : 3 : ಕೃಷ್ಣಶೆಟ್ಟಿ

ಫ್ರಾಸಾ : 4 : ರವಿ

ಫ್ರಾಸಾ : 5 : ಮಹೇಶ

ಫ್ರಾಸಾ : 6 : ವಿ ಸಿ ವನರಾಜು

ಫ್ರಾಸಾ : 7 : ಮಹೇಶ್ ಕುಮಾರ್

**II.ಅಭಿಯೋಜನೆ ಪರ ಗುರ್ತಿಸಲ್ಪಟ್ಟ ದಾಖಲೆಗಳ ಪಟ್ಟಿ:**

ನಿಪಿ : 1 ಮತ್ತು 2: ಫ್ರಾಸಾ-1 ಮತ್ತು 2 ರವರ ಹೇಳಿಕೆಗಳು

ನಿಪಿ : 3 : ಸ್ಥಳ ಮಹಜರ್

ನಿಪಿ : 4 ಮತ್ತು 5: ಛಾಯಾಚಿತ್ರಗಳು

ನಿಪಿ : 6 : ಅಮಾನತ್ತು ಮಹಜರ್

ನಿಪಿ : 7 ಮತ್ತು 8: ಛಾಯಾಚಿತ್ರಗಳು

ನಿಪಿ : 9 : ದೂರು

ನಿಪಿ : 10 : ಶವತನಿಖಾ ವರದಿ

ನಿಪಿ : 11 : ಪಿ ಎಂ ವರದಿ

ನಿಪಿ : 12 : ನೋಟೀಸು

ನಿಪಿ : 13 : ಪ್ರತ್ಯುತ್ತರ

ನಿಪಿ : 14 : ಕಚ್ಚಾ ನಕಾಶೆ

ನಿಪಿ : 15 ಮತ್ತು 16: ಛಾಯಾಚಿತ್ರಗಳು

ನಿಪಿ : 17 : ಐ ಎಂ ವಿ ವರದಿ

ನಿಪಿ : 18 : 63(4) ರ ಭಾರತೀಯ ಸಾಕ್ಷ್ಯ ಅಧಿನಿಯಮ ಪ್ರಮಾಣ ಪತ್ರ

ನಿಪಿ : 19 : ಪ್ರಥಮ ವರ್ತಮಾನ ವರದಿ

**III.ಅಭಿಯೋಜನೆ ಪರ ಗುರ್ತಿಸಲ್ಪಟ್ಟ ಮುದ್ದೆಮಾಲು ಪಟ್ಟಿ: ಇಲ್ಲ**

**IV.ಆರೋಪಿ ಪರ ವಿಚಾರಣೆಗೊಳಪಟ್ಟ ಸಾಕ್ಷಿದಾರರ ಪಟ್ಟಿ: ಇಲ್ಲ**

**V.ಆರೋಪಿ ಪರ ಗುರ್ತಿಸಲ್ಪಟ್ಟ ದಾಖಲೆಗಳ ಪಟ್ಟಿ: ಇಲ್ಲ**

**(ಗಿರೀಶ ಆರ್. ಬಿ.)**
***1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.,***
***ಗುಂಡ್ಲುಪೇಟೆ.***

Visit **ecourts.gov.in** for updates or download mobile app "**eCourts Services**" from Android or iOS
*SK*